ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 97-103
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದಖ್ಖನ್ನಿನ ಸೂಫಿ ಸಂತರ ಸಾಹಿತ್ಯಕ ಕೊಡುಗೆಗಳು: ಒಂದು ಅಧ್ಯಯನ

**ಅಮೀನಸಾಬ. ಘಟ್ನೂರ* & ಡಾ. ಜಗದೀಶ ಕಿವುಡನವರ****

*ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. **ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

***Abstract:***

*ಸೂಫಿ ಚಳುವಳಿಯು ದಖ್ಖನ್ನಲ್ಲಿ ವಿಶಿಷ್ಟ ಪ್ರಕಾರದ ಸಾಹಿತ್ಯ ರಚನೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ, ಸೂಫಿ ಸಂತರು 14 ರಿಂದ 17ನೇ ಶತಮಾನದವರೆಗೆ ದಖ್ಖನ್ನನು ತಮ್ಮ ನೆಲೆಯನ್ನಾಗಿಸಿಕೊಂಡು. ಉರ್ದುವಿನಲ್ಲಿ ಗಜಲ್‌ಗಳನ್ನು, ಮಸನ್ನವಿಗಳನ್ನು ಮತ್ತು ದ್ವಿಪದಿ (ಎರಡು ಸಾಲಿನ ಪದ್ಯ)ಗಳನ್ನು ಬರೆದರು. ಇದರಿಂದಾಗಿ ಪರ್ಶಿಯನ್, ಉರ್ದು, ಅರಬ್ಬಿ ಭಾಷೆ ಮತ್ತು ಸಾಹಿತ್ಯ ಪ್ರವರ್ಧಮಾನಕ್ಕೆ ಬಂದಿತು. ತಸ್‌ವ್ವೂಫ್ ಅನುಸರಿಸುವ ಸೂಫಿಗಳು ಮಾತ್ರ ಸಾಂಸ್ಥಿಕ ಧರ್ಮ ಹೇಳು ಕಂದಾಚಾರಿಗಳಿಗೆ ಭಿನ್ನವಾಗಿ ಬದುಕಿದವರು. ಅದು ಉಳಿದ ಗೆರೆಯನ್ನು ದಾಟಿ ಹೋಗಿ ಚಿಂತನೆ, ಕಾವ್ಯ, ಸಂಗೀತ, ಸಾಹಿತ್ಯ, ಚಿತ್ರಕಲೆ, ತತ್ವಶಾಸ್ತ್ರ, ಯೋಗಶಾಸ್ತ್ರ ಮತ್ತು ಸೃಜನಶೀಲ ಫಲಗಳನ್ನು ಮನುಕುಲಕ್ಕೆ ಕೊಟ್ಟರು.*

**Keywords:** *ಧಾರ್ಮಿಕ ಚಳವಳಿ, ಸೂಫಿ ಸಂತರು, ಸಾಹಿತ್ಯ, ತಸ್‌ವ್ವೂಫ್,*

## ಪೀಠಿಕೆ

ಮಧ್ಯಯುಗೀನ ದಖ್ಖನ್ ಇತಿಹಾಸದಲ್ಲಿ ಮಹತ್ವ ಪೂರ್ಣವಾದ ಕಾಲಘಟ್ಟವೆಂದರೆ ಧಾರ್ಮಿಕ ಚಳುವಳಿಯ ಸನ್ನಿವೇಶ, ಹಿಂದೂ-ಮುಸ್ಲಿಂ ಮತ ಧರ್ಮಗಳ ಪ್ರವರ್ಧಮಾನದ ಯುಗವೂ ಹೌದು. ಮೂಢನಂಬಿಕೆಗಳ ವಿನಾಶ, ಸಂಪ್ರದಾಯಗಳ ಪುನರ್‌ಮನನಕ್ಕೆ ಹಾಗೂ ನಿಜವಾದ ಧರ್ಮವೆಂದರೇನು ಎಂಬುದಕ್ಕೆ ಹೊಸ ರೂಪ ನೀಡಿದ ಯುಗವೂ ಆಗಿತ್ತು. ಸೂಫಿ ಮತ್ತು ಭಕ್ತಿ ಆಂದೋಲನವು ಸೂಫಿ ಸಂತರು ದಖ್ಖನಿಗೆ ಆಗಮಿಸುವಂತೆ ಮಾಡಿತು. ಅವರಲ್ಲಿ ಹೆಚ್ಚಿನ ಸಂಖ್ಯೆಯ ಗಣ್ಯರಲ್ಲದ ಗುಂಪುಗಳ ಮೇಲೆ ತಮ್ಮ ಬಲವಾದ ಹಿಡಿತವನ್ನು ಹೊಂದಿರುವ ಸೂಫಿಗಳು ಸಾರ್ವಜನಿಕರಲ್ಲಿ ಬಹಮನಿ ಶಕ್ತಿಯ ವಿಶ್ವಾಸದ ಬೇರುಗಳನ್ನು ಆಳವಾಗಿ ಸಾಗಿಸಲು ಸಮರ್ಥರಾಗಿದ್ದರು ಎಂದು ತಿಳಿದು ಬರುತ್ತದೆ. ಸೂಫಿ ಸಂತರು ಚಿಶ್ತಿ ಸಂಪ್ರದಾಯಗಳ ಅಡಿಪಾಯ ಹಾಕಿದರು.

## ತಸ್‌ವ್ವೂಫ್ ಅರ್ಥ ಮತ್ತು ಸ್ವರೂಪ

ತಸ್‌ವ್ವೂಫ್ ವಿವಿಧ ಆಧ್ಯಾತ್ಮಿಕ ವಿಷಯಗಳ ಸಂಕಲನವೆಂದರೆ ತಪ್ಪಾಗಲಾರದು. ಅನೇಕ ಸಂಶೋಧಕರು ತಸ್‌ವ್ವೂಫ್ ಎಂದರೆ 'ಸೌಫ್'ನ ವೇಷಾಧಾರಣೆ ಎಂದು ಕರೆದರೆ, ಕೆಲವರು ವಿಷಯ ಇಂದ್ರೀಯಗಳ ಶುದ್ಧೀಕರಣ ಹಾಗೂ ಹೃದಯ ಮಧ್ಯಸ್ಥಿಕೆಯ ಸ್ಥಿತಿಯೆಂದು ಕರೆದಿದ್ದಾರೆ.

***Please cite this article as:*** ಅಮೀನಸಾಬ. ಘಟ್ನೂರ & ಜಗದೀಶ ಕಿವುಡನವರ. (2023). ದಖ್ಖನ್ನಿನ ಸೂಫಿ ಸಂತರ ಸಾಹಿತ್ಯಕ ಕೊಡುಗೆಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(6), 97–103.

ಪಾರಿಭಾಷಿಕವಾಗಿ ತನವನ್ ಆ ಪಥವಾಗಿದೆ ಯಾವುದು ಸಮಸ್ತ ಜೀವಕೋಟಿಯ ಮುಕುಟ ಮಣಿ ಅರ್ಥಾತ್ ಮನುಷ್ಯನಿಗೆ 'ಪರಂ'ಗುರಿಯ ಶೋಧದ ಕುಶಲತೆಯನ್ನು ಕಲಿಸಿ, ಏಕತ್ವದ ನೇರಮಾರ್ಗ (ಸೀರಾತ್ ಮುಸ್ತಖೀಮ್)ದಲ್ಲಿ ನಡೆಸುವ ಜೀವನದ ಕ್ರಮವೆನ್ನಬಹುದು.

ಸೂಫಿ ಪಂಥವು ಇಸ್ಲಾಮ್ ಧರ್ಮದಲ್ಲಿನ ಆಧ್ಯಾತ್ಮದ ಮುಖ್ಯ ತಿರುಳು, ಇದೇ ಪಂಥವು ಮುಂದೆ ಇಸ್ಲಾಂಮ್ ಪ್ರಭಾವಿ ಅನುಭಾವಿ ಚಳವಳಿಯೆಂದು ಪರಿಗಣಿಸಲ್ಪಟ್ಟಿದೆ.[1] ಸೂಫಿ ಮತವು ಇಸ್ಲಾಂ ಧರ್ಮದಲ್ಲಿ ಯಾವುದೇ ನಿಶ್ಚಿತವಾದ ಸಿದ್ಧಾಂತವನ್ನು ಹೊಂದಿರುವುದಿಲ್ಲ. ಏಕೆಂದರೆ ಅದು ಜಾಗತಿಕವಾಗಿ ವ್ಯಾಪಿಸಿರುವ ಪ್ರದೇಶಗಳಲ್ಲಿ ಹೊಂದಿದೆ. ವಿದ್ಯಮಾನವಾಗಿರುವ ಆಯಾ ಧರ್ಮಗಳ ಶ್ರದ್ಧಾರೂಪಗಳನ್ನು ತನ್ನ ಪಂಥದಲ್ಲಿ ಮನೋಭೂಮಿಕೆಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅದು ಅತ್ಯಂತ ಸದ್ಭಾವನೆಯ್ಯನ್ನು ಹೊಂದಿದೆ. ಈ ಕಾರಣಕ್ಕಾಗಿ ಅದು ವ್ಯಾಪ್ತಸಿರುವ ಪ್ರದೇಶಗಳಲ್ಲಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಸೂಫಿ ಮತವು ತನ್ನ ಸರಳೀಕೃತ ನಿಲುವುಗಳಿಂದ ಹಾಗೂ ತನ್ನ ಪ್ರಖರವಾದ ಅಭಿವ್ಯಕ್ತಿಯ ಮೂಲಕ ಪ್ರಸಿದ್ಧಿಯನ್ನು ಹೊಂದಿದೆ. ಹಲವು ಸಂದರ್ಭದಲ್ಲಿ ಧಾರ್ಮಿಕ ವಿರೋಧಭಾವವನ್ನು ಮೆಟ್ಟಿ ನಿಲ್ಲುವಲ್ಲಿ ಐತಿಹಾಸಿಕ ವಿಶೇಷತೆಯನ್ನು ಹೊಂದಿದೆ. ಇದು ಅಷ್ಟೇ ವಾಸ್ತವಿಕವು ಆಗಿದೆ. ಇಂತಹ ಚಳವಳಿಗಳು 9 ರಿಂದ 17ನೇ ಶತಮಾನದ ನಡುವೆ ನಡೆದ ಅನೇಕ ಚಳವಳಿಗಳಲ್ಲಿ ಸೂಫಿ ಚಳುವಳಿಯು ವಿಶಿಷ್ಟವಾದ ಚಳವಳಿಯಾಗಿದೆ. ಸೂಫಿ ಸಿದ್ಧಾಂತವು 'ಒಬ್ಬ ಸೂಫಿಯನ್ನು ಆಧ್ಯಾತ್ಮಿಕ ಆಚರಣೆಯ ಮೂಲ ದೈವಿಕ ಮಿಲನವನ್ನು ಪಡೆಯವ ಮಾರ್ಗವನ್ನು ಅನ್ವೇಷಿಸುವ ಮುಸ್ಲಿಂಮ್' ಎಂಬ ಸರಳವಾದ ವಿವರಣೆಯನ್ನು ಕೊಡುವುದಾಗಿದೆ.

**ತಸ್‌ವ್ವೂಫ್ ಸ್ವರೂಪ**

ಯಾರು ಮೊದಲ ಸೂಫಿ? ಕೆಲವು ಸೂಫಿಗಳ ಪ್ರಕಾರ ಪ್ರವಾದಿ ಮೊಹಮ್ಮದ್ ಪೈಗಂಬರ ಪ್ರವಾದಿ ನುಡಿದ ಲಾ ಇಲಾಹ ಇಲ್ಲಲ್ಲಾ (ಒಬ್ಬನ ಹೊರತು ದೇವರಿಲ್ಲ) ಎಂಬ ಮೂಲಮಂತ್ರವೇ ಸೂಫಿ ಸಮಂಥ ಸಾರಭೂತ ರಹಸ್ಯ ಎಂದು ಇವರು ನಂಬುತ್ತಾರೆ. ಲಾ ಇಲಾಹ ಇಲ್ಲಲ್ಲವೆಂದರೆ ಇಲ್ಲ, ಇಲ್ಲಾ ! ನಿನ್ನ ಬಿಟ್ಟು ಏನೂ ಇಲ್ಲಾ ರಸೂಲಿಲ್ಲಾ' ಎಂದು ನುಡಿದರು.[2] ಪ್ರವಾದಿ ಮೊಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹು ಸಲ್ಲಮ್=ಸ.ಅ.) ರವರ ಸಹವರ್ತಿಗಳನ್ನು ನಂಬಿರುವ ಧರ್ಮದ ನಾಲ್ಕು ರತ್ನಗಳೆಂದು ಕರೆಯುತ್ತಿದ್ದರು. ಅಲಿ ಅಬೂಬಕ್ಕರ್, ಉಮರ್ ಬಿನ್, ಉಸ್ಮಾನ್ ಬಿನ್ ಅಫ್ವಾನ್ ಮತ್ತು ಹಜರತ್ ಅಲಿ. ದೇವ ಪ್ರಿಯ ಪ್ರವಾದಿ ಮೊಹಮ್ಮದ ಇವರಿಂದ 14 ಸೂಫಿ ಸಂತತಿಗಳು ಶಾಖೆಗಳಾದವು. ಜಗತ್ತಿನ ಇಡೀ 'ಖಿಲಾಫತ್' ಅವರು ಪಡೆದರು. ತದನಂತರ ಬೈಯತಿನ ಹೂಗಳೆಂದು ಸತ್ಯದ ಹಣ್ಣು ಕಟ್ಟಿದವು,[3] ಆದರೆ ಆಧುನಿಕ ಮೂಲಭೂತವಾದಿಗಳು ಸೂಫಿ ತಸ್‌ವ್ವೂಫ್ (ಅನುಭಾವ) ಪರಿಕಲ್ಪನೆಯನ್ನು ಇಸ್ಲಾಮ್ ವಿರೋಧಿ ಎಂದು ಮುಲಾಜಿಲ್ಲದೆ ಘೋಷಿಸುತ್ತಾರೆ. ಸೂಫಿ ಚರಿತ್ರೆಯಲ್ಲಿ ಇಸ್ಲಾಮನ್ನು ಕಟ್ಟುನಿಟ್ಟಾಗಿ ಅನುಸರಿಸುವ ಹಾಗೂ ಧರ್ಮ ಪ್ರಸಾರ ಮಾಡುವ ಮಿಷನರಿಗಳು, ಧರ್ಮ ರಕ್ಷಣೆಗಾಗಿ ಶಸ್ತ್ರಧಾರಿಗಳಾದವರು ಇಲ್ಲವೆಂಬತಲ್ಲ. ಆದರೆ ತಸ್‌ವ್ವೂಫ್ ಅನುಸರಿಸುವ ಸೂಫಿಗಳು ಸಾಂಸ್ಥಿಕ ಧರ್ಮ ಹೇಳುವ ಕಂದಾಚಾರಗಳಿಗೆ ಭಿನ್ನವಾಗಿ ಬದುಕಿದವರು. ಅದು ಉಳಿದ ಗೆರೆಯನ್ನು ದಾಟಿ ಚಿಂತನೆ, ಕಾವ್ಯ, ಸಂಗೀತ, ಚಿತ್ರಕಲೆ, ತತ್ವಶಾಸ್ತ್ರ, ಯೋಗಶಾಸ್ತ್ರಗಳ ಸಾಹಿತ್ಯ ಸೃಜನಶೀಲ ಫಲಗಳನ್ನು ಮನುಕುಲಕ್ಕೆ ಕೊಟ್ಟವರು.

ಸೂಫಿಗಳೆಂದರೆ ಕೇವಲ ಯೋಗಸಾಧನೆ ಮಾಡುತ್ತಿದ್ದ ಸಂತರಲ್ಲ. ಕವಿಗಳು ವಿದ್ವಾಂಸರು, ವಿರಕ್ತರು, ಸಂಸಾರಿಗಳು, ಶಾಸ್ತ್ರಕಾರರು, ಸಂಗೀತಗಾರರು, ಪ್ರಭುತ್ವ ವಿರೋಧಿಗಳು ವ್ಯವಸ್ಥೆಯ ಭಾಗವಾಗಿದ್ದರು. ಸನಾತನಿಗಳು ನಿರಂಕುಶಮತಿ ತತ್ವಜ್ಞಾನಿಗಳು ಸಾಹಿತಿಗಳು ಹೀಗೆ ಅದೊಂದು ಬಹುರೂಪಿಯಾದ ಲೋಕ. ಕರ್ನಾಟಕದ ಮಟ್ಟಿಗೆ ನೋಡಿದರೆ ಕೂಡ ಶಾ ಮಿರಂಜಿಯಂತ ಶ್ರೇಷ್ಠ ಉರ್ದು ಕವಿಗಳು, ಬಂದೇನವಾಜನಂತಹ ತತ್ವಜ್ಞಾನಿಗಳು, ಅಮೀನುದ್ದೀನ್ ನಂತಹ ನಿರಂಕುಶಮತಿಗಳು ಕೊನೆಗೆ ಆದಿಲ್‌ಶಾಹ ದೊರೆಯೂ ತನ್ನನ್ನು 'ಸೂಫಿ' ಎಂದು ಕರೆದುಕೊಳ್ಳುತ್ತಾನೆ.

**ಭಾಷೆ ಮತ್ತು ಸಾಹಿತ್ಯ**

ಬಹಮನಿ ಸುಲ್ತಾನರ  ರಾಜ್ಯವು ಪಾಶ್ಚಿಮಾತ್ಯ ರಾಷ್ಟ್ರಗಳು ಹಾಗೂ ಅರಬ್ ದೇಶಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದರಿಂದ ಪರ್ಶಿಯನ್, ಉರ್ದು, ಅರಬ್ಬಿ ಭಾಷೆ ಮತ್ತು ಸಾಹಿತ್ಯ ಪ್ರವರ್ಧಮಾನಕ್ಕೆ ಬಂದಿತು. ಅನಂತರ ಆಳ್ವಿಕೆ ಮಾಡಿದ ಶಾಹಿ ಸುಲ್ತಾನರು ಸಾಹಿತ್ಯ ಕ್ಷೇತ್ರವನ್ನು ಪೋಷಿಸಿದರು, ಇವರ ಶಿಕ್ಷಣದ ಮಾಧ್ಯಮ ಬಹುತೇಕವಾಗಿ ಪರ್ಶಿಯನ್ ಭಾಷೆಯೇ ಆಗಿತ್ತು. ರಾಜ್ಯ (ಸರ್ಕಾರಿ) ಭಾಷೆಯೂ ಪರ್ಶಿಯನ್ ಆಗಿತ್ತು. ಪರ್ಶಿಯನ್ ಭಾಷೆಯನ್ನು ಹೊರತುಪಡಿಸಿದರೆ ಅರಬ್ಬಿ ಭಾಷೆಯೂ ಕೂಡಾ ಮಹತ್ವತೆಯನ್ನು ಪಡೆಯಿತು. ಅರೇಬಿಯದೊಂದಿಗಿನ ವ್ಯಾಪಾರ ವಲಸೆಗಾರರ ಪ್ರಭಾವದಿಂದ ಈ ಭಾಷೆಯೂ ಕೂಡ ರಾಜ್ಯದಲ್ಲಿ ಪ್ರಚಲಿತ ಭಾಷೆಯಾಯಿತು.

**ಪರ್ಶಿಯನ್ ಸಾಹಿತ್ಯ**

ಬಹಮನಿ ಸ್ಥಾಪಕ ಹಸನ್ ಗಂಗೂ ಕೂಡ ಪರ್ಶಿಯನ್ ಮೂಲದವನಾದ್ದರಿಂದ ಪರ್ಶಿಯನ್ ಕವಿ–ಪಂಡಿತ–ವಿದ್ವಾಂಸರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದನು. ಈತನ ಆಸ್ಥಾನ ಕವಿ ಇಸಾಮಿಯು 'ಫತುಹಾ–ಉಸ್–ಸಾಲತಿನ್' ಕೃತಿಯನ್ನು ರಚಿಸಿದನು. ಐನುದ್ದೀನ್ ಬಿಜಾಪರಿ, ಹಕಿಂಅಲಿಮ್ ಉದ್ದೀನ್ ತಬ್ರೀಜಿ, ಮೂಯಿನುದ್ದೀನ್ ಹರವಿ, ನಾಸಿರುದ್ದೀನ್ ಶಿರಾಜಿ, ಲುತ್‌ಫಾಲ್ಲಾಶಿರಾಜಿ, ಮುಫ್ತಿ ಅಹ್ಮದ್ ಹರವಿ, ಷರೀಫ್ ಸಮರಕಂದೀ, ಮಹ್ಮದ್ ಬದಕ್ಷಿ ಮೊದಲಾದ ಪ್ರಸಿದ್ಧ ಕವಿ–ಪಂಡಿತರು ಈತನ ಆಸ್ಥಾನವನ್ನು ಅಲಂಕರಿಸಿದ್ದರು.

ಹಸನ್ ನಂತರ ಬಹಮನಿ ಸುಲ್ತಾನನಾದ ಮಹಮ್ಮದ್‌ಶಾಹ ಸ್ವತಃ ಕವಿ, ವಿದ್ವಾಂಸ ಹಾಗೂ ಜನಾಶ್ರಯನಾದ್ದರಿಂದ ವಿದೇಶಿ ಪಂಡಿತರು ದಖ್ಖನ್ ಕಡೆ ಆಕರ್ಷಿತರಾದರು. ಅವರಲ್ಲಿ ಆಮಂತ್ರಿತನಾದ ಪ್ರಸಿದ್ಧ ಕವಿಯೆಂದರೆ ಹಾಫೀಜ. ಈತನಿಂದ ಸುಲ್ತಾನನು ತುಂಬಾ ಪ್ರಭಾವಿತಗೊಂಡಿದ್ದಂತೆ ತೋರುತ್ತದೆ. ಈತನ ನಂತರ ಬಂದ ಫಿರೋಜ್‌ಶಾಹನು ಪ್ರಸಿದ್ಧ ಕವಿಯಾಗಿದ್ದು, ಗಜಲ್‌ಗಳನ್ನು ಮತ್ತು ದ್ವಿಪದಿ (ಎರಡು ಸಾಲಿನ ಪದ್ಯ)ಗಳನ್ನು ಬರೆದನು ಹಾಗೂ ಈತನ ಕಾವ್ಯನಾಮ ಉರುಜಿ (ನಂತರದಲ್ಲಿ ಫಿರೋಜ್) ಎಂದಿತ್ತೆಂದು ತಿಳಿಸಿದ್ದಾನೆ.[4] ಒಂದನೇ ಶಿಹಾಬುದ್ದೀನ್ ಅಹ್ಮದನೂ ವಿದ್ವಾಂಸನಾಗಿದ್ದು ಬಹಮನಿಯ ಖ್ಯಾತ ಸೂಫಿ ಸಂತ ಮಹಮ್ಮದ್ ಗೇಸೂದರಾಜ್(ರ.ಅ) ಈತನ ಆಶ್ರಯದಲ್ಲಿದ್ದು ಅನೇಕ ಕಾವ್ಯಗಳನ್ನು ರಚಿಸಿದನು. ಈತನು ಕವಿ–ಪಂಡಿತರೂ ಮತ್ತು ಚರಿತ್ರೆಕಾರರ ಆಶ್ರಯದಾತನಾಗಿದ್ದನು. ಇತಿಹಾಸಕಾರರಾದ ಆಜಾದಿ, ದಾವೂದ್ ಬಿದರಿ ಈತನ ಆಸ್ಥಾನದಲ್ಲಿದ್ದರು. ಮೂರನೇ ಮಹಮ್ಮದನ ಕಾಲದಲ್ಲಿ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳಕಿನಲ್ಲಿ ಮೆರೆದ ಬಹಮನಿಯ ಸಾಮ್ರಾಜ್ಯವು ದೇಶ–ವಿದೇಶಗಳ ವಿದ್ವಾಂಸರಿಗೆ ಆಶ್ರಯ ನೀಡಿತು. ಪ್ರಧಾನಿ (ಖ್ವಾಜಾ) ಮಹಮ್ಮದ ಗವಾನನು ಬೀದರನ್ನು ಶಿಕ್ಷಣ ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಶ್ರೀಮಂತ

ಕೇಂದ್ರವನ್ನಾಗಿಸಿದ್ದರಿಂದ ಜಲಾಲುದ್ದೀನ್ ದವಾನಿ ಮೊದಲಾದ ವಿಶ್ವವಿಖ್ಯಾತ ಪಂಡಿತರು ಅಲ್ಲಿಗೆ ಬಂದು ನೆಲೆಸಿದರು. ಅಬ್ದುಲ್ ರೆಹಮಾನ್ ಜಾಮಿ, ಉಬೈದುಲ್ಲ ಆಹ್‌ರಾರ್, ಶಂಸುದ್ದೀನ್ ಸಖೂರ್ ಮತ್ತು ಜಫರ್–ನಾಮಾದ ಕೃರ್ತೃ ಷರೀಫುದ್ದೀನ್ ಯಜ್ದಿಯಂತಹ ವಿದ್ವಾಂಸರೂ ಬೀದರಿನಿಂದ ಆಕರ್ಷಿತಗೊಂಡಿದ್ದರು. ಹಜರತ್ ಷಾ ಮಿರಂಜ್–ಶಂಮ್ಸ್–ಉಲ್ಲ್–ಉಷಕ್ ರವರ ಆತ್ಮ ಕಥೆ 'ಖುದ್ ನಿವಿಶ್ತ್ ವಾ ನಾಸ್ತ್–ನಾಮಾ'ನ್ನು ರಚಿಸಿದರು.

**ಅರೇಬಿಕ್ ಸಾಹಿತ್ಯ**

ಪರ್ಷಿಯಾ ಮತ್ತು ಇತರೆ ಅರಬ್ ರಾಷ್ಟ್ರಗಳೊಂದಿಗಿನ ವ್ಯಾಪಾರ ಸಂಪರ್ಕವು ಅರೇಬಿಕ್ ಭಾಷೆ ಮತ್ತು ಸಾಹಿತ್ಯ ಭಾರತದಲ್ಲಿ ಬೆಳೆಯಲು ಮುಖ್ಯ ಕಾರಣವಾಯಿತು. ಸುಲ್ತಾನರೂ ಕೂಡ ಈ ಭಾಷೆಯ ವೃದ್ಧಿಗೆ ಕಾರಣರಾದರು. ಹಸನ್ ಗಂಗೂನ ಆಶ್ರಯದಲ್ಲಿದ್ದ ಶರೀಫ್ ಸಮರ್‌ಕಂದೀ ಮತ್ತು ಮೊಹಮ್ಮದ್ ಬದಕ್ಷಿ ಅರೇಬಿಕ್‌ನಲ್ಲಿ ಪಂಡಿತರೂ ಮತ್ತು ಖಗೋಳ ತಜ್ಞರೂ ಆಗಿದ್ದರು. ಅತ್ವಾರ್–ಉಲ್–ಅಬ್‌ರಾರ್ ಕೃತಿಯ ಕರ್ತೃ ಜುನ್ನೈದಿಯೂ ಕೂಡ ಹಸನ್ ಬಹಮನ್ ಶಾಹ್ ಕಾಲದ ಪಂಡಿತನು.[5] ಮುಹಮ್ಮದಶಾಹ, ಫಿರೋಜ್‌ಶಾಹ ಮತ್ತು ಅಹಮ್ಮದಶಾಹ ಇವರು ಅರೇಬಿಕ್‌ನಲ್ಲಿ ಪಾಂಡಿತ್ಯ ಪಡೆದಿದ್ದರು. ಫಿರೋಜ್‌ಶಾಹನು ಇಸ್ಲಾಂ ನ್ಯಾಯ, ತರ್ಕ, ಗಣಿತ, ತತ್ವ, ಕುರಾನ್‌ಗಳ ಮೇಲೆ ವಿಶೇಷ ಅಧ್ಯಯನ ಕೈಗೊಂಡಿದ್ದನು. ಈತನ ಗುರು ಫಜಲುಲ್ ಇಂಜು. ಇದೇ ಅವಧಿಯಲ್ಲಿ ಸಂತ ಗೇಸೂದರಾಜ್ ಅರೇಬಿಕ್ ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದನು. ಅವುಗಳು 'ತಪ್ಸೀರೆ ಕಶಾಕ್' 'ತಪ್ಸೀರೆ ಸೂಲೂಕ್' ಮಲಫೂಜಾತ್ ಅವ್ವಲ್(ಪ್ರವಚನಗಳು) ಕುರಾನ್ ಮೇಲೆ ವ್ಯಾಖ್ಯಾನ ರಚಿಸಿದನಲ್ಲದೇ, ತರ್ಕ–ತತ್ವ ಜ್ಞಾನಗಳ ಮೇಲೆ ಹಲವು ಕೃತಿಗಳನ್ನು ರಚಿಸಿದನು.[6] ಇವರು ಕ್ರಿ.ಶ. 1402 ರಲ್ಲಿ ಗುಲ್ಬರ್ಗಾಕ್ಕೆ ಬಂದರು, ಗೇಸುದರಾಜ್ ದಖ್ಖನಿ ಭಾಷೆಯ ಪ್ರಥಮ ಗದ್ಯ ಲೇಖಕರಾಗಿದ್ದರು. 'ಶಹಬಾಜ್' (ಗಂಡ ಭೇರುಂಡ) ಎಂಬ ಕಾವ್ಯನಾಮದಿಂದ ಫಾರ್ಸಿ ಭಾಷೆಯಲ್ಲಿ ಗಜಲ್‌ಗಳನ್ನು ರಚನೆ ಮಾಡಿದರು.[7] ಮಹಮ್ಮೂದ ಗವಾನ ಈ ಕಾಲದ ಪ್ರಸಿದ್ಧ ಪಂಡಿತನು, ಅನೇಕ ಅರಬ್ಬೀ ಪದ್ಯಗಳನ್ನು ರಚಿಸಿದ. ಬೀದರ ಮಧ್ಯಕಾಲೀನ ಭಾರತದ ಪ್ರಸಿದ್ಧ ಪರ್ಶಿಯನ್ ಮತ್ತು ಅರೇಬಿಕ್ ಶಿಕ್ಷಣ ಕೇಂದ್ರವಾಗಿತ್ತು. ಇಲ್ಲಿ ಅರಬ್ಬೀ ಭಾಷೆಯ ದೊಡ್ಡ ಗ್ರಂಥ ಭಂಡಾರವಿತ್ತೆಂದು ತಿಳಿದು ಬರುತ್ತದೆ.

ಬಿಜಾಪೂರಕ್ಕೆ ಸಂಬಂಧಿಸಿದಂತೆ ಹೇಳಬೇಕೆಂದರೆ ಅರೇಬಿಕ್ ಪಂಡಿತ ಸಿಬ್‌ಘತ್–ಉಲ್ಲೇನು ಬಿಜಾಪುರದ ಸುಲ್ತಾನ ಒಂದನೇ ಇಬ್ರಾಹಿಂಶಾಹನ ಆಶ್ರಯದಲ್ಲಿದ್ದವನು. ಈತನು ಮದೀನಾ ಮೂಲದವನು. ಹಬೀಬುಲ್ಲಾ ಕೂಡ ಅರೇಬಿಕ್ ತತ್ವಜ್ಞಾನಿಯಾಗಿದ್ದನು. ಇದರಿಂದ ಆದಿಲ್‌ಶಾಹಿಗಳೂ ಕೂಡ ಅರೇಬಿಕ್ ಸಾಹಿತ್ಯದ ರುಚಿಯನ್ನು ಸವಿದಿದ್ದರು ಮತ್ತು ಅದನ್ನು ಬೆಳೆಸಿಕೊಂಡು ಬಂದಿದ್ದರು.

**ಉರ್ದು ಸಾಹಿತ್ಯ**

ದಖ್ಖನಿನಲ್ಲಿಯ ಜನಸಾಮಾನ್ಯರ ಭಾಷೆ ಉರ್ದು ಆಗಿತ್ತು. ಇದರಿಂದಗಿ ಸೂಫಿ ಸಂತರು ಕೂಡ ಸಾಮಾನ್ಯರು ಆಡುವ ಭಾಷೆಯಲ್ಲಿಯೇ ಧಾರ್ಮಿಕ ಚಳವಳಿ ಆರಂಭಿಸಿ, ಯಶಸ್ವಿಯೂ ಆದರೂ. ಇದು ಸಾಕಷ್ಟು ಬೆಳವಣಿಗೆ ಹೊಂದಿದ್ದು ದಖನ್‌ದಲ್ಲಿ ಮಾತ್ರ, ಅದು ಮೂಲತಃ ಉತ್ತರ ಭಾರತದಿಂದ ಪ್ರಸಾರಗೊಂಡಿತು. ಪರ್ಶಿಯನ್, ಅರೇಬಿಕ್, ಹಿಂದಿ, ಮರಾಠಿ ಭಾಷೆಗಳ ಸಮ್ಮಿಶ್ರಣವೇ ಉರ್ದು ಭಾಷೆ. ಹಜರತ್ ಮಹಮ್ಮದ್ ಗೇಸೂದರಾಜ್ ಅವರು ಮೊದಲ ಬಾರಿಗೆ ಹಳೆ ಉರ್ದು ಭಾಷೆಯಲ್ಲಿ 'ಮಿರಾಜ್–ಉಲ್–ಅಶಿಕಿನ್' (ಸೂಫಿ ಗುಹ್ಯತೆಯ) 'ಹಿದಾಯಿತ್ ನಾಮ್', 'ಶಿಕಾರ್–ನಾಮಾ', 'ಚಿಕ್ಕಿ

ನಾಮ' ಮತ್ತು 'ಶಿಕಾರ್ ನಾಮಾ' ಎಂಬ ಕೃತಿಗಳನ್ನು ರಚಿಸಿದರು. ಈತನು ಸಂಸ್ಕೃತದಲ್ಲಿಯೂ ಪಾಂಡಿತ್ಯ ಪಡೆದಿದ್ದನು. ಈತನ ಮಗ ಅಕ್ಬರ್ ಹುಸೇನಿಯೂ ಕೂಡ ಉರ್ದು ಭಾಷೆ ಮತ್ತು ಸಾಹಿತ್ಯ ಶ್ರೀಮಂತಗೊಳ್ಳಲು ಕಾರಣನಾದನಲ್ಲದೇ ಸೂಫಿ ಚಳುವಳಿಯ ಕುರಿತು ಕೃತಿ ರಚಿಸಿದನು.[8] ನಿಜಾಮಿಯು ಉರ್ದು ಭಾಷೆಯಲ್ಲಿ ಅನೇಕ ದ್ವಿಪದಿಗಳನ್ನು ರಚಿಸಿದನು. ಉರ್ದು ಭಾಷೆಯ ಮೊದಲ ಕಾವ್ಯಗಳನ್ನು ಅಶ್ರಫ್‌ನು ರಚಿಸಿದನು. ದಖ್ಖಣೀ ಎಂಬ ಭಾಷಾ ವಾಚಿಕ ಪ್ರಥಮ ಬಾರಿಗೆ ಕ್ರಿ.ಶ.1500 ರಲ್ಲಿ 'ಕುರೇಶಿ ಬಿದರಿ' ಎಂಬ ಕವಿ ಕಾವ್ಯದಲ್ಲಿ ದೊರೆಯುತ್ತದೆ. ಅವನು ಕೂಡ ಅನೇಕ ದ್ವಿಪದಿ (ಮಸ್ನವಿ)ಗಳನ್ನು ರಚಿಸಿದನು.[9]

ಬಿಜಾಪೂರ ಆದಿಲ್‌ಶಾಹಿಗಳ ಕಾಲದಲ್ಲಿ ಉರ್ದು ಭಾಷೆಯು ತನ್ನ ಸ್ಥಾನವನ್ನು ಮತ್ತಷ್ಟು ಭದ್ರಗೊಳಿಸಿಕೊಂಡಿತು. ಉರ್ದು ಸಾಹಿತ್ಯ ಕೃಷಿ ಆದಿಲ್‌ಶಾಹಿಗಳ ಕಾಲದಲ್ಲಿ ಶ್ರೀಮಂತಿಕೆಯಲ್ಲಿಯೇ ಮೆರೆಯಿತು. ಹಜರತ್ ಷಾ ಮಿರಂಜ್–ಶಂಮ್ಸ್–ಉಲ್ಲ್–ಉಷಕ್(ರ.ಅ) ರಚಿಸಿದ 'ಖುಷ್–ನಾಮಾ', 'ಖುಷ್–ನಫ್ಜ್', 'ಶಹದತ್–ಉಲ್–ಹಖೀಕತ್', "ಶರಾಹ್ ಮರ್ಗುಬ್ ಅಲ್–ಕುಲುಬ್', 'ಮಗ್ಜ್–ಎ–ಮಾರ್ಘೂಬ್' ಮತ್ತು 'ಚಹರ್ ಶಹಾದತ್'. 'ಗುಲ್ಬಾಸ್' ಮತ್ತು 'ಜಲ್ ತರಂಗ್' ಕೂಡ ಅವರು ರಚಸಿದ್ದಾರೆ. ಅದರಲ್ಲಿ "ಖುಷನಾಮ" ಎಂಬುದು ಶಾ ಮೀರಂಜಿ ಶಂಸಿರವರ ಕಾವ್ಯನಾಮವಾಗಿತ್ತು. ಮಗ ಷಾ ಬರ್ಹಾನುದ್ದೀನ್ ಜಾನಂ (ಮ.1597) ತಂದೆಯ ಒಳ್ಳೆಯ ಕೆಲಸಗಳನ್ನು ಮುಂದುವರಿಸಿದನು. ಅವನ ಮುಖ್ಯವಾದ ಕೃತಿ 'ಇರ್ಷದ್ ನಾಮಾ', ಸೂಫಿ ಪಂಥವನ್ನು ಕುರಿತ ಸಣ್ಣದೊಂದು ಗದ್ಯ ಕೃತಿ ಕಲಿಮತುಲ್ ಹಕೈಕ್. ಜಾನಂಮ್ ಮೂಲತಃ ಒಬ್ಬ ಅನುಭಾವಿ, ಈ ಲಕ್ಷಣಗಳು ಪ್ರಾಯಶಃ ಷಾ ಬುರ್ಹಾನ್ ಅಲ್–ದಿನ್ ಜಾನ್ಂ (ರ.ಅ.) ಅವರ ಅತೀಂದ್ರಿಯ ಗದ್ಯ ಮತ್ತು ಕಾವ್ಯಗಳಲ್ಲಿ ಉತ್ತಮವಾಗಿ ಪ್ರತಿಫಲಿಸುತ್ತದೆ. ಇವರ ಕುರಿತು ಐತಿಹಾಸಿಕ ಭಾಷಾಶಾಸ್ತ್ರಜ್ಞ ರಾಜ ಎಸ್.ಕೆ.ಚಟರ್ಜಿಯವರು ಬುರ್ಹಾನುದ್ದೀನ್–ಅಲ್–ಜಾನ್ಂ ಅವರ "ಹಿಂದಿ"ಯ ಕಬೀರರೊಂದಿಗೆ ಹೋಲಿಸಿದ್ದಾರೆ, ಇದು ಹಿಂದೂ ಹಿಂದಿಯ ಶಬ್ದಕೋಶ ಮತ್ತು ಮೀಟರ್ ಅನ್ನು ಹೊಂದಿದೆ ಎಂದು ಗಮನಿಸಿದರು–ಅರೇಬಿಕ್ ಲಿಪಿಯಲ್ಲಿ ಬರೆಯಲಾಗಿದೆ" ನಂತರ ಚಟರ್ಜಿಯವರು ದಖ್ಖನಿ ಉಪಭಾಷೆಯ ಪಂಜಾಬಿಗೆ ಹೋಲಿಕೆಯ ವಿಷಯವನ್ನು ವಿಸ್ತರಿಸುತ್ತಾರೆ.[10] ಆದರೆ ಅವರು ಸಾಹಿತ್ಯದ ಕಲೆ ಕಡಿಮೆ. ಅಮೀನುದ್ದೀನ್–ಅಲಿ–ಅಲಾರವರು ರಚಿಸಿದ ಕೃತಿಗಳು, 'ರಿಸಾಲಾ–ಈ–ತಸ್‌ವೂಫ್' 'ಥಿಲಾವತೇ ವಜುದು' 'ಗುಪ್ತಾರೆ ಅಮೀನುದ್ಧೀನ್' 'ಗಂಜ ಮಕ್ತಫಿ' ಸೂಫಿ ಸಾಹಿತ್ಯಕ ಕೃತಿಗಳನ್ನು ತಾತ, ತಂದೆ–ಮಗ ಸೇರಿ ಹೊಸ ಭಾರತೀಯ ಸಂಸ್ಕೃತಿ ರೂಪಗೊಳ್ಳಲು ಕಾರಣರಾದರು. ಮತ್ತು ಹಿಂದೂ–ಇಸ್ಲಾಂ ತಾತ್ವಿಕ ವಿಚಾರಗಳೆರಡನ್ನು ರೂಢಿಸಿಕೊಂಡಿದ್ದರಿಂದ ಸಹಜವಾಗಿಯೇ ವಿಶಿಷ್ಟ ಸಂಸ್ಕೃತಿಯ ಪುಟ ಆರಂಭಗೊಂಡಿತು. ಸಂಗೀತಾಸಕ್ತನಾಗಿದ್ದ ಸುಲ್ತಾನ ಎರಡನೇ ಅಲಿ ಆದಿಲ್‌ಶಾಹನನ್ನು ನಾಯಕನನ್ನಾಗಿ ಮಾಡಿಕೊಂಡು ಅಬ್ದುಲ್‌ನು 'ಇಬ್ರಾಹಿಂ–ನಾಮಾ' ಎಂಬ ಕಾವ್ಯವನ್ನು ರಚಿಸಿದನು. ಫುತುಹ್–ನಾಮಾ ನಿಜಾಂಶಾಹ ಮತ್ತು ಮೆಜ್‌ಬಾನಿ–ನಮಾ–ಆದಿಲ್‌ಶಾಹ ಕೃತಿಗಳನ್ನು ಹಸನ್‌ಶೌಕಿ ರಚಿಸಿದನು. ಅಮೀರ್‌ಖುಸ್ರೂ ಬರೆದ ಮೂರು ಪದ್ಯಗಳನ್ನು ಭಾಷಾಂತರಿಸಿದವನು ಮಲಿಕ್ ಖುಸುನುದ್ ಮಹಮ್ಮದ್ ಆದಿಲ್‌ಶಾಹನ ಇಚ್ಛೆಯಂತೆ ಈತನು ಅನೇಕ ಕೃತಿಗಳನ್ನು ದಖನಿಗೆ ಭಾಷಾಂತರಿಸಿದ್ದಾನೆ. ಎರಡನೇ ಅಲಿ ಆದಿಲ್‌ಶಾಹನು ಸ್ವತಃ ಕವಿಯೂ ಆಗಿದ್ದು ಗಜಲ್‌ಗಳನ್ನು ರಚಿಸಿದನು. ಮುಲ್ಲಾ ನುಸ್ರತಿ, ಮಿಯಾನ್ ಹಾನಿಸ್ ಹಾಗೂ ಮಿರ್ಜನ್ ಮರ್ಸಿಯಾ 'ಗುಲಿಸ್ತಾನ್–ಇ–ಇಷ್', 'ಅಲಿನಾಮ', 'ಸಿಕಂದರ್ ನಾಮ' ಎಂಬ ಕೃತಿಗಳನ್ನು ರಚಿಸಿದನು.

ಸೂಫಿ ಚಳುವಳಿಯು ದಕ್ಷಿಣದಲ್ಲಿಯ ಧಾರ್ಮಿಕ–ವೈಚಾರಿಕ ರಂಗದಲ್ಲಿ ಮಹತ್ತರ ಪಾತ್ರವಹಿಸಿದೆ. ಸಾಪ್ (ಶುದ್ಧಿ) ಇದರ ಅಪಭ್ರಂಶವೇ 'ಸೂಫಿ' ಎಂದು ತಿಳಿಯಬಹುದು. ಮನ–ಮನಸ್ಸುಗಳನ್ನು ಶುದ್ಧೀಕರಿಸಿಕೊಳ್ಳುವ ವಿಚಾರದ ಸಂಗಮವೇ ಸೂಫಿ. ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲು ಮನುಷ್ಯನು ಮೊದಲು ಆತ್ಮಶುದ್ಧಿಗೆ ಪ್ರಯತ್ನಿಸಬೇಕು. ಅದಕ್ಕೆ ದಾರಿ ಕಲ್ಪಿಸಿಕೊಟ್ಟಿದ್ದು ಸೂಫಿ ಚಳುವಳಿ. ಇದು ತನ್ನೊಳಗಿನ ಅರಿವನ್ನು ಪಡೆದರೆ ಮಾತ್ರ ಸಾಧ್ಯ. ಮನುಷ್ಯ–ಮನುಷ್ಯನನ್ನು ಪ್ರೀತಿ–ಗೌರವಗಳಿಂದ ಸ್ಪಂಧಿಸಿದರೆ ಮಾತ್ರ ಆತನನ್ನು ಭಗವಂತನು ಪ್ರೀತಿಸುತ್ತಾನೆ. ಜಾತಿ–ಮತ–ಪಂಥಗಳೆಂಬ ಬೇಧಗಳು ಭಗವತ್‌ದೃಷ್ಟಿಗೆ ಸಹಕಾರಿಯಾಗಲಾರವು ಎಂಬುದು ಸೂಫಿಗಳ ವಿಚಾರವಾಗಿತ್ತು. ಪ್ರೀತಿ–ಗೌರವ, ದಾನ–ಧರ್ಮ, ಸಹಕಾರ–ಉಪಕಾರಗಳಿಂದ ಮನುಷ್ಯನಲ್ಲಿ ಭಗವಂತನನ್ನು ಕಾಣಬೇಕು.

ಸೂಫಿ ಪಂಥವು ಇಸ್ಲಾಮಿನ ಅಧ್ಯಾತ್ಮಿಕತೆಯ ರೂಪವೆಂದು ಹೇಳಬಹುದು. ಜಗತ್ತಿನ ಸಕಲ ಧರ್ಮಗಳ ಉನ್ನತ ಮೌಲ್ಯಗಳನ್ನು ಸೂಫಿಗಳು ತಮ್ಮಲ್ಲಿ ಅಳವಡಿಸಿಕೊಂಡು ಈ ಚಳವಳಿ ಜನಪ್ರೀಯುವಾಗಲು ಕಾರಣರಾದರು. ಜಾತಿಬೇಧವಿಲ್ಲದೇ ಮಾನವರೆಲ್ಲರೂ ಸರಿಸಮಾನರು, ಅವರಲ್ಲಿ ಮೇಲು–ಕೀಳು ತರವಲ್ಲ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುವ ಮೂಲಕ ಸುಧಾರಣಾವಾದವನ್ನು ಯಶಸ್ವಿಗೊಳಿಸಿದರು. ಇಲ್ಲಿ ಇಸ್ಲಾಂನ ಮೂಲಭೂತವಾದಿತ್ವವನ್ನು ಬದಿಗೊತ್ತಿ, ದೇವರು ಹಲವರಿದ್ದರೂ ಕೂಡ ಭಗವಂತನ ಸಾಕ್ಷಾತ್ಕಾರ ಪಡೆಯಲು ಬಳಸುವ ಮಾರ್ಗ ಒಂದೇ. ಅದುವೇ ಭಕ್ತಿ–ಸತ್ಯಾನ್ವೇಷಣೆ.

ದಖ್ಖನ್‌ನಲ್ಲಿ ಆಗ ಅಸ್ತಿತ್ವದಲ್ಲಿದ್ದ ಪ್ರಮುಖ ಎರಡು ಇಸ್ಲಾಂ ಪಂಗಡಗಳಾದ ಶಿಯಾ ಮತ್ತು ಸುನ್ನಿ ಪಂಡಗಳಲ್ಲಿ ಯಾವುದೇ ಭೇದವು ಇಲ್ಲವೆಂದು ತಿಳಿಸದರಲ್ಲದೇ, ಶಾಂತಿ–ಸಮಾನತೆ ಮತ್ತು ಸಹಬಾಳ್ವಿಗೆ ಹೆಚ್ಚು ಒತ್ತು ನೀಡಿದರು. ಶಿಯಾಗಳ ಆಳ್ವಿಕೆಯಲ್ಲಿಯೇ ಸೂಫಿ ಚಳವಳಿ ಆರಂಭಗೊಂಡರೂ ಕೂಡ ತಮ್ಮ ಮೂಲ ಉದ್ದೇಶ ಸಾಧನೆಗೆ ಶ್ರಮಿಸಿದ ಕೀರ್ತಿ ಸೂಫಿ ಸಂತರಿಗೆ ಸಲ್ಲುತ್ತದೆ. ಹಿಂದೂ–ಮುಸ್ಲಿಂ ಧರ್ಮಗಳಲ್ಲಿ ಐಕ್ಯಭಾವನೆ ಮೂಡಿಸಿದ್ದು ಸೂಫಿ ಚಳುವಳಿಯ ಮಹತ್ವದ ಸಾಧನೆ ಎಂದೇ ಹೇಳಬೇಕು. ಈಶ್ವರ–ಅಲ್ಲಾ, ರಾಮ–ರಹೀಮರೆಲ್ಲರೂ ಒಂದೇ, ಏಕದೇವನೇ ಈ ಜಗತ್ತಿಗೆ ಒಡೆಯ ಎಂದು ಸಾರುವ ಮೂಲಕ ಮಾನವಿಕ ಮೌಲ್ಯಗಳಿಗೆ ತಳಹದಿ ಕಲ್ಪಿಸಿದರು. ಜಗತ್ತಿನ ಎರಡು ಮಹಾನ್ ಸಂಸ್ಕೃತಿಗಳೆನಿಸಿಕೊಂಡ ಹಿಂದೂ–ಮುಸ್ಲಿಂ ಸಂಸ್ಕೃತಿಯ ಸಮ್ಮಿಲನಕ್ಕೆ ಕಾರಣವಾದದ್ದು ಈ ಸೂಫಿ ಚಳುವಳಿ. ಸಮಾಜ, ಸಂಸ್ಕೃತಿ, ಭಾಷೆ, ಧರ್ಮಗಳ ತಡೆಗೋಡೆಗಳನ್ನು ಇದು ಮೀರಿ ನಿಲ್ಲುವಷ್ಟರ ಮಟ್ಟಿಗೆ ಜನಾನುರಾಗ ಪಡೆಯಿತು.

**ಕೊನೆಟಿಪ್ಪಣಿಗಳು**


1. ಕಟ್ಪಾಡಿ ಫಕೀರ ಮಹಮ್ಮದ್. (2015). *ಸೂಫಿ ಸಂತರು.* (ಎರಡನೇ ಮುದ್ರಣ), ಅಂಕಿತ ಪುಸ್ತಕ. ಪು–9
2. ರಹಮತ್ ತರೀಕೆರೆ. (2011). *ಕರ್ನಾಟಕದ ಸೂಫಿಗಳು.* ಕನ್ನಡ ವಿಶ್ವವಿದ್ಯಾಲಯ. ಪು.27
3. ಮುಹಮ್ಮದ್ ಸಿಬ್ಘತ್‌ಉಲ್ಲಾಹ್. (ಅನು.). (2014). *ಇಬ್ರಾಹಿಂ ನಾಮ.* ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ. ಸಂ.6 ಪು. 61, 62.
4. ದೇವು ಪತ್ತಾರ. (2015). *ಬಹಮನಿ ಸಾಮ್ರಾಜ್ಯ.* ಕರ್ನಾಟಕ ಸಾಹಿತ್ಯ ಅಕಾಡಮಿ. ಪು.50

5. ಷೇಕ್ ಅಲಿ, ಬಿ. (ಪ್ರ.ಸಂ.) (2018). *ಕರ್ನಾಟಕ ಚರಿತ್ರೆ.* ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ. ಸಂ.4 ಪು. 404.
6. ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ. (2018) *ಪ್ರೇಮ, ಸೂಫಿ ಬಂದೇ ನವಾಜ್,* ನ್ಯೂಸ್ ಪ್ಲಸ್ ಕಮ್ಯುನಿಕೇಷನ್ಸ್. ಪು–141
7. ಪೀರ್‌ಬಾಷಾ ಹಾಗೂ ಅನುಪಮಾ.ಎಚ್.ಎಸ್. (ಪ್ರ.ಸಂ.) (2021). *ನಿರಹಂ ಸೂಫಿ; ದರ್ಶನ ಕಾವ್ಯ'* ಲಡಾಯಿ ಪ್ರಕಾಶನ. ಪು–129
8. ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ. (2018). *ಪೂರ್ವೋಕ್ತ.* ಪು–144,145
9. ಆರ್.ಮುನಿಸ್ವಾಮಿ. (ಪ್ರ.ಸಂ.) (1999) *ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ವಿಜಾಪುರ ಜಿಲ್ಲಾ.* ಗ್ಯಾಸೆಟಿಯರ್ ಇಲಾಖೆ. ಪು. 883
10. ಮೂಖಿಶ್ ಅಲಿಖಾನ. (2003). *ಎನ್‌ಸೈಕ್ಲೋಪಿಡಿಯಾ ಆಫ್ ಸೂಫಿಸಂ.* ಅಮೂಲ್ ಪಬ್ಲಿಕೆಷನ್. ಸಂ.10 ಪು. 199